# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗೌರಿಬಿದನೂರು ತಾಲ್ಲೂಕಿನ ಮರಳೂರು ಗ್ರಾಮದಲ್ಲಿನ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗೆ ಹುದ್ದೆ ಮಂಜೂರು ಮಾಡಿ ವಸತಿ ಶಾಲೆಯನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ; ಬಿಸಿಡಬ್ಲ್ಯೂ 335 ಬಿಎಂಎಸ್ 2012, ದಿನಾಂಕ:21-11-2012.
2. ಸರ್ಕಾರದ ಆದೇಶ ಸಂಖ್ಯೆ; ಬಿಸಿಡಬ್ಲ್ಯೂ 506 ಬಿಎಂಎಸ್ 2012, ದಿನಾಂಕ:21-11-2012.
3. ಸರ್ಕಾರದ ಆದೇಶ ಸಂಖ್ಯೆ; ಸಕಇ 385 ಮೊದೇಶಾ 2016, ದಿನಾಂಕ:15-02-2017.
4. ಸರ್ಕಾರದ ಆದೇಶ ಸಂಖ್ಯೆ; ಬಿಸಿಡಬ್ಲ್ಯೂ 45 ಬಿಎಂಎಸ್ 2014, ದಿನಾಂಕ:27-09-2017.
5. ಸರ್ಕಾರದ ಆದೇಶ ಸಂಖ್ಯೆ; ಸಕಇ 38 ಮೊದೇಶಾ 2017, ದಿನಾಂಕ:31-07-2017.
6. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಏಕ ಕಡತ ಸಂಖ್ಯೆ: KREIS /ADMN / PSAN/11/2022-ADMN.

******

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮಾಂಕ (1) ರಿಂದ (5) ರಲ್ಲಿನ ಸರ್ಕಾರದ ಆದೇಶಗಳಲ್ಲಿ 2012-13ನೇ ಸಾಲಿನಲ್ಲಿ ಒಟ್ಟು 33 ಹಿಂದುಳಿದ ವರ್ಗಗಳ ಅಟಲ್ ಬಿಹಾರಿ ವಾಜಪೇಯಿ, ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ಮಂಜೂರು ಮಾಡಿ ಆದೇಶಿಸಲಾಗಿದೆ. ಆದರೆ, ಈ ಪೈಕಿ 04 ವಸತಿ ಶಾಲೆಗಳಿಗೆ ಹುದ್ದೆಗಳ ಸೃಜನೆಯೊಂದಿಗೆ ಆದೇಶಿಸಲಾಗಿದೆ. ಉಳಿಕೆ 29 ಹಿಂದುಳಿದ ವರ್ಗದ ವಸತಿ ಶಾಲೆಗಳಿಗೆ ಮಾತ್ರ ಹುದ್ದೆಗಳ ಸೃಜನೆಯೊಂದಿಗೆ ಮಂಜೂರಾತಿ ಮಾಡದೆ ಕೇವಲ ವಸತಿ ಶಾಲೆಗಳನ್ನು ಮಾತ್ರ ಮಂಜೂರಾತಿ ಮಾಡಿ ಆದೇಶಿಸಲಾಗಿದೆ.

ಮೇಲೆ ಕ್ರಮಾಂಕ ಓದಲಾದ ಕ್ರಮಾಂಕ (6) ರ ಏಕ ಕಡತದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರು ಗೌರಿಬಿದನೂರು ತಾಲ್ಲೂಕಿನ ಮರಳೂರು ಗ್ರಾಮದಲ್ಲಿನ ಹಿಂದುಳಿದ ವರ್ಗಗಳ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗೆ ನಿವೇಶನ ಲಭ್ಯವಾಗಿ, ಕಟ್ಟಡ ಕಾಮಗಾರಿ ಕಾರ್ಯ ಪೂರ್ಣಗೊಂಡು ಸದರಿ ಕಟ್ಟಡದಲ್ಲಿ ಡಾ. ಬಿ. ಆರ್ .ಅಂಬೇಡ್ಕರ್ ವಸತಿ ಶಾಲೆ (ಪ.ವರ್ಗ-724), ಮಂಚೆನಹಳ್ಳಿ, ಗೌರಿಬಿದನೂರು

----2)

ಚಿಕ್ಕಬಳ್ಳಾಪುರ ಜಿಲ್ಲೆ ವಸತಿ ಶಾಲೆಯು ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದೆ. ಗೌರಿಬಿದನೂರು ತಾಲ್ಲೂಕಿನ ಮರಳೂರು ಗ್ರಾಮದಲ್ಲಿನ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗೆ ಹುದ್ದೆಗಳನ್ನು ಮಂಜೂರು ಮಾಡದೇ ವಸತಿ ಶಾಲೆಯನ್ನು ಪ್ರಾರಂಭಿಸಿ ದಾಖಲಾತಿಗಳನ್ನು ಪ್ರಾರಂಭಿಸಿದಲ್ಲಿ ವಸತಿ ಶಾಲೆಯ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆಯಾಗುತ್ತದೆ. ಸದರಿ ಹುದ್ದೆಗಳಿಗೆ ಭರಿಸಬೇಕಾದ ವೆಚ್ಚವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಲೆಕ್ಕಶೀರ್ಷಿಕೆ: 2225-03-277-2-62 (ರಾಜ್ಯವಲಯ-ಯೋಜನೆ) ರಡಿ ಭರಿಸಲಾಗುವುದು. ಸದರಿ ವಸತಿ ಶಾಲೆಗೆ ಶೈಕ್ಷಣಿಕ ದಾಖಲಾತಿಯನ್ನು ಪ್ರಾರಂಭಿಸಲು ಹುದ್ದೆಗಳನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಕಇ 444 ಎಂಡಿಎಸ್ 2022, ಬೆಂಗಳೂರು, ದಿನಾಂಕ:06.01.2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಗೌರಿಬಿದನೂರು ತಾಲ್ಲೂಕಿನ ಮರಳೂರು ಗ್ರಾಮದಲ್ಲಿ ಹಿಂದುಳಿದ ವರ್ಗಗಳ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಯನ್ನು 2023-24 ನೇ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭಿಸಲು ಮೊದಲ ವರ್ಷಕ್ಕೆ ಅಗತ್ಯವಿರುವ ವಿವಿಧ ವೃಂದದ ಒಟ್ಟು 09 ಹುದ್ದೆಗಳನ್ನು ಈ ಕೆಳಕಂಡಂತೆ ಸೃಜಿಸಿ, ಹುದ್ದೆಗಳಿಗೆ ಭರಿಸಬೇಕಾದ ವೆಚ್ಚವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಲೆಕ್ಕಶೀರ್ಷಿಕೆ: 2225-03-277-2-62 (ರಾಜ್ಯವಲಯ-ಯೋಜನೆ) ರಡಿ ಭರಿಸುವಂತೆ ಸೂಚಿಸಿ ಆದೇಶಿಸಿದೆ.

| ಕ್ರ. ಸಂ | ಹುದ್ದೆಯ ವಿವರ | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1 | ಪ್ರಾಂಶುಪಾಲರು (For 6-10 standard, Group-B Scale or 6-12 Standard, Group-A Junior Scale) | 01 | ನಿಯೋಜನೆ |
| 2 | ಪದವೀಧರ ಕನ್ನಡ ಭಾಷಾ ಶಿಕ್ಷಕರು | 01 | ನೇರ ನೇಮಕಾತಿ |
| 3 | ಪದವೀಧರ ಆಂಗ್ಲ ಭಾಷಾ ಶಿಕ್ಷಕರು | 01 | |
| 4 | ಪದವೀಧರ ಹಿಂದಿ ಭಾಷಾ ಶಿಕ್ಷಕರು | 01 | |
| 5 | ಪದವೀಧರ ಗಣಿತ ಶಿಕ್ಷಕರು | 01 | |
| 6 | ನಿಲಯಪಾಲಕರು | 01 | ನಿಯೋಜನೆ |
| 7 | ಅಡುಗೆಯವರು | 01 | ಹೊರಗುತ್ತಿಗೆ |
| 8 | ಅಡುಗೆ ಸಹಾಯಕರು | 01 | |
| 9 | ಕಾವಲುಗಾರರು | 01 | |
| **ಒಟ್ಟು** | | **09** | |

----3)

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 701 ವೆಚ್ಚ-3/2022, ದಿನಾಂಕ:12.12.2022 ಮತ್ತು 26.12.2022 ರಲ್ಲಿ ನೀಡಿರುವ ಸಹಮತಿ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಆಇ 01 ಟಿಎಫ್‌ಪಿ 2022, ದಿನಾಂಕ:23.09.2022 ರನ್ವಯ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಂಭುಲಿಂಗಯ್ಯ)
ಸರ್ಕಾರದ ಅಪರ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ
06/01/23

**ಇವರಿಗೆ:-**

1) ಮಹಾಲೇಖಪಾಲರು, (ಎ & ಇ ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
3) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3&9), ವಿಧಾನಸೌಧ. ಬೆಂಗಳೂರು.
4) ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
5) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿಗಳು:**

1) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ.
2) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ

***